## 11

# ಪವಿತ್ರಾತ್ಮನ ವಾಗ್ದಾನ

## (ಯೋಹಾನ 15)

*"ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳುವನು. ನೀವು ಮೊದಲಿನಿಂದ ನನ್ನ ಸಂಗಡ ಇದ್ದಕಾರಣ ನೀವೂ ಸಾಕ್ಷಿಗಳಾಗಿದ್ದೀರಿ" (ವಚನಗಳು 26, 27).*

ಮೇಲುಪ್ಪರಿಗೆಯ ಕೊಠಡಿಯ ಚರ್ಚೆಯಲ್ಲಿ, ಲೋಕವು ಅಪೊಸ್ತಲರನ್ನು ದ್ವೇಷಿಸುವದು ಎಂದು ಯೇಸು ಹೇಳಿದ್ದನು (15:18-25). ಆ ಎಚ್ಚರಿಕೆಯಲ್ಲಿ ಆಳವಾದ ಟೀಕೆ ಹಾಗೂ ಬಹಿಷ್ಕಾರದ ಅರ್ಥವಿತ್ತು. ಇಂತಹ ವಿಧವಾದ ಹಿಂಸೆಯನ್ನು ತಾನು ಸಹ ಲೋಕದವರಿಂದ ಎದುರಿಸಿದನು ಎಂದು ಯೇಸು ಹೇಳಿದ್ದನು. ಲೋಕವು ಅವರನ್ನು ಅವಮಾನಪಡಿಸಿ, ತಿರಸ್ಕರಿಸಿ, ಕೋಪದಿಂದ ವಿರೋಧ ವ್ಯಕ್ತಪಡಿಸಿ - ಅವರನ್ನು ಕೊಲ್ಲುವ ಸಾಧ್ಯತೆಯೂ ಎದುರಾಗಿತ್ತು. ಮುಂದೆ ಸಂಭವಿಸಬಹುದಾದ ವಿಚಾರಗಳನ್ನು ಆತನು ತಿಳಿಸಿದಾಗ, ಇದರ ನಿಮಿತ್ತ ಅವರಲ್ಲಿದ್ದ ಭಯವು ದ್ವಿಗುಣವಾಯಿತು. ಹೇಗೂ ಯೇಸು ಅವರನ್ನು ಬಿಟ್ಟು ಹೋಗುವನೆಂಬ ಪ್ರಕಟನೆಯು ಅವರಿಗೆ ಉಂಟಾಗಿತ್ತು. ಈ ಸತ್ಯದ ನಿಮಿತ್ತವಾಗಿ ಅವರು ಬಹಳ ಅಧೈರ್ಯಗೊಂಡರು. ಮುಂದೆ ಬರಲಿದ್ದ ವಿರೋಧದ ಸಂಗಡ ಈ ವಿಚಾರವು ಸಹ ಅವರಲ್ಲಿ ಅನಿಶ್ಚಯವನ್ನು ಉಂಟುಮಾಡಿತು. ಇತರೆ ಕೆಟ್ಟ ಸಂಗತಿಗಳನ್ನು ಅವರು ಸಹಿಸಲು ಸಾಧ್ಯವಿತ್ತೇ?

ಅಪೊಸ್ತಲರಿಗೆ ಉತ್ತೇಜನವು ಅಗತ್ಯವಾಗಿದ್ದರಿಂದ, ಯೇಸು ಅವರ ಮನಸ್ಸುಗಳನ್ನು ಎಚ್ಚರಿಕೆಯಿಂದ, ಶುಭಸಂದೇಶದ ಮಾತುಗಳೆಡೆಗೆ ಸೆಳೆದನು. ಆದ್ದರಿಂದ ಆತನು ಅವರನ್ನು ಬಿಟ್ಟುಹೋಗದೆ, ಪವಿತ್ರಾತ್ಮನ ಸಹಾಯವನ್ನು ನೀಡುವೆನೆಂಬ ಅದ್ಭುತವಾದ ಭರವಸೆಯನ್ನು ನೀಡಿದನು. ಮುಖ್ಯವಾಗಿ ಆತನು ಹೇಳಿದ್ದೇನೆಂದರೆ, ಹೌದು ನಾನು ಈಗಾಗಲೇ ತಿಳಿಸಿದ ವಿಚಾರದ ನಿಮಿತ್ತ ನೀವುಗಳು ತಲ್ಲಣಗೊಂಡಿರುವಿರಿ. ಹಾಗೂ ನಾನು ನಿಮಗಾಗಿ ಒಬ್ಬ ಸಹಾಯಕನನ್ನು ಕಳುಹಿಸುವೆನು ಅಂದನು. ನಾನು ಕಳಿಸುವ ಆತ್ಮನಿಂದ ನಿಮಗೆ ವಿಶೇಷ ವಾದ ಸಹಾಯವು ದೊರೆಯುವದು.

ಈ ಹಿಂದೆ ಯೇಸು ಅಪೊಸ್ತಲರೊಂದಿಗೆ ನಡೆಸಿದ ಚರ್ಚೆಯಲ್ಲಿ ಪವಿತ್ರಾತ್ಮನ ಸಂಗತಿಯನ್ನು ತಿಳಿಸಲಾಗಿದೆ (ನೋಡಿರಿ 14:16, 26). ಅವರುಗಳು ಇತರೆ ಪ್ರಮುಖವಾದ ಸಂಗತಿಗಳನ್ನು ಅರಿಯಬೇಕಾದ ಕಾರಣದಿಂದ, ಕರ್ತನು ಅವರಿಗೆ ಪವಿತ್ರಾತ್ಮನ ಪರಿಚಯವನ್ನು ಮಾಡಿ ಅಗತ್ಯವಾದ ಸತ್ಯವನ್ನು ಪ್ರಕಟಮಾಡಿದ್ದನು.

15:26, 27, ರಲ್ಲಿರುವ ಭರವಸದ ಮಾತುಗಳಲ್ಲಿ, ಯೇಸು ಉದ್ದವಾಗಿ ಮಾತನಾಡದೆ, ಪವಿತ್ರಾತ್ಮನು ಅಪೊಸ್ತಲರಲ್ಲಿ ಮಾಡಲಿರುವ ಕಾರ್ಯವನ್ನು ಸಂಕ್ಷಿಪ್ತವಾಗಿ ವರ್ಣಿಸಿದನು. ಆತನ ಕುರಿತಾದ ಚಿತ್ರಣದಲ್ಲಿ, ಯಾವುದೇ ಸಂದೇಹವಿರವಿಲ್ಲ, ಅದರಲ್ಲಿ ಧೈರ್ಯವು ಒಳಗೊಂಡಿತ್ತು. ಈ ಮಾತುಗಳ ಹಿನ್ನೆಲೆಯನ್ನು ಸರಿಯಾಗಿ ತಿಳಿಯುವದಾದರೆ, ನಮಗೆಲ್ಲರಿಗೂ ಪ್ರೋತ್ಸಾಹ ಉಂಟಾಗುತ್ತದೆ.

## ಒಬ್ಬ ಸಹಾಯಕನು

ಪವಿತ್ರಾತ್ಮನನ್ನು "ಸಹಾಯಕನು" ಎಂದು ಯೇಸು ತಿಳಿಸಿರುವನು (ಸಂತೈಸುವವನು; KJV; ASV; "ಆಲೋಚಕನು"; NIV). ಅಪೊಸ್ತಲರಿಗೆ ಸಹಾಯದ ಅಗತ್ಯವು ಇದ್ದದರಿಂದ, ಪವಿತ್ರಾತ್ಮನೇ ಅವರಿಗೆ ಸಹಾಯಕನಾದನು. "ಪರಕ್ಲೇಟಸ್" ಎಂಬ ಗ್ರೀಕ್ ಪದವನ್ನು ಯೇಸು ಬಳಸಿರುವನು. ಆ ಪದದಲ್ಲಿ ವಿವಿಧ ಗುಣಲಕ್ಷಣಗಳು ಅಡಕವಾಗಿವೆ. 1 ಯೋಹಾನ 2:1ರಲ್ಲಿ, ಯೇಸುವಿನ ಕುರಿತು ಯೋಹಾನನು ಇದೇ ಪದವನ್ನು ಬಳಸಿರುವನು. ಆದರೆ ಇತರೆ ಅನುವಾದಗಳಲ್ಲಿ "ಮಧ್ಯವರ್ತಿ" ಎಂಬ ಪದ ಬಳಕೆಮಾಡಲಾಗಿದೆ. "ಸಂತೈಸುವವನು" ಎಂಬ ಪದಕ್ಕಿಂತಲೂ ಇದು ವಿಭಿನ್ನವಾಗಿದೆ. ಆದರಿಂದ KJV ಯಲ್ಲಿರುವಂಥ "ಸಂತೈಸುವವನು" ಎಂಬ ಪದವು ಅಲ್ಪ ಅರ್ಥವನ್ನು ಹೊಂದಿರುತ್ತದೆ.

ಪವಿತ್ರಾತ್ಮನು ಅಪೊಸ್ತಲರಿಗೆ ವಿವಿಧ ಮಹತ್ಕಾರ್ಯಗಳನ್ನು ನಡೆಸುವ ಸಾಮರ್ಥ್ಯವನ್ನು ನೀಡಿದ್ದನು. ಆತನು ಅವರಿಗೆ ಶಕ್ತಿಯನ್ನು ನೀಡದೆ, ಕರ್ತನು ಅವರಿಗೆ ನೇಮಿಸಿದ್ದ ಕೆಲಸಗಳನ್ನು ಮಾಡಿಸುತ್ತಿರಲಿಲ್ಲ. ಆ ವಿಶೇಷವಾದ ಭಲ ಹಾಗೂ ಸಾಮರ್ಥ್ಯ ಪವಿತ್ರಾತ್ಮನ ಸಹವಾಸದಿಂದ ಮಾತ್ರ ಬರುತ್ತಿತ್ತು.

## ಕಳುಹಿಸಲ್ಪಟ್ಟವನು

ಯೇಸು ತಾನೇ ಅವರಿಗೆ ಪವಿತ್ರಾತ್ಮನನ್ನು ಕಳುಹಿಸುವವನು ಎಂದು ತಿಳಿಸಿದನು. ಆದ್ದರಿಂದ ಆತನು, "ನಾನು ಆತನನ್ನು ತಂದೆಯಿಂದ ಕಳುಹಿಸುವೆನು." ಇನ್ನೊಂದು ಅರ್ಥದಲ್ಲಿ, ತಂದೆಯು ಆತನನ್ನು ಕಳುಹಿಸಿದರೂ, ಮತ್ತೊಂದು ಅರ್ಥದಲ್ಲಿ ಯೇಸು ತಾನೇ ಆತನನ್ನು ಕಳುಹಿಸಿದನು. ಯೇಸುವಿನ ಆ ವಾಗ್ದಾನದಲ್ಲಿ "ನಾನು" ಎಂಬ ಪದವು ಯೇಸು ತಾನೇ ಕಳುಹಿಸುವವನು ಎಂಬ ಅರ್ಥವಿದೆ. ಆದರೂ 14:16ರ ಪ್ರಕಾರ ಯೇಸು ಮಾಡಿದ ಮನವಿಯ ಮೇರೆಗೆ ತಂದೆಯು ಆತ್ಮನನ್ನು ಕಳುಹಿಸಿದನು. 14:26ರಲ್ಲಿ, ಯೇಸು ಆತ್ಮನ ಕುರಿತು "ಆ ಸಹಾಯಕನನ್ನು, ತಂದೆಯು *ನನ್ನ* ಹೆಸರಿನಲ್ಲಿ ಕಳುಹಿಸುವನು" (ಒತ್ತಿ ಹೇಳಿದ್ದು ನನ್ನದು) ಎಂದು ಬರೆದದೆ. ಆ ಮಹೋನ್ನತವಾದ ಸಂತೈಸುವ ಆಶೀರ್ವಾದವನ್ನು ಕಾರ್ಯಗತ ಮಾಡುವಲ್ಲಿ ತಂದೆ ಹಾಗೂ ಮಗನು ಸೇರಿದ್ದಾರೆ. ಮಗನ ಮನವಿಯ ಹಾಗೂ ಪ್ರಾರ್ಥನೆಯ ಮೇರೆಗೆ ಯೇಸುವಿನ ಹೆಸರಿನಲ್ಲಿ ತಂದೆಯು ಆತ್ಮನನ್ನು ಕಳುಹಿಸಿದ್ದನು. ಈ ವಾಗ್ದಾನದಲ್ಲಿ ತಂದೆ ಮತ್ತು ಮಗನಲ್ಲಿರುವ ಐಖ್ಯತೆಯ ಪ್ರಧಾನವಾಗಿದ್ದು, ತಂದೆಯೊಂದಿಗೆ ಮಗನು ಸಹ ಸಮಾನನಾಗಿದ್ದನು ಎಂದು ತೋರಿಬರುತ್ತದೆ.

ಆದ್ದರಿಂದ ಪವಿತ್ರಾತ್ಮನು ತ್ರಯೆಕತ್ವದಲ್ಲಿನ ಮತ್ತೊಬ್ಬ ವ್ಯಕ್ತಿಯಾಗಿದ್ದಾನೆ. ಆತನೇ ಪವಿತ್ರಾತ್ಮ ದೇವರು, ಆತನು ಬಂದು ಅಪೊಸ್ತಲರಲ್ಲಿ ನೆಲೆಗೊಂಡು, ಅವರ ಆತ್ಮೀಕ ಅಗತ್ಯತೆಗಳನ್ನು ಪೂರೈಸುವವನಿದ್ದನು. ಈ ಅಪೊಸ್ತಲರು ಸಭೆಯ ಬುನಾದಿಯಾದರು. ಆ ಬುನಾದಿಯಲ್ಲಿ ಯೇಸು ಮೂಲೆಗಲ್ಲಾಗಿದ್ದನು, ಅಪೊಸ್ತಲರು ಹಾಗೂ ಪ್ರವಾದಿಗಳು ಬುನಾದಿಯ ವಿಸ್ತರಣೆಯಾಗಿದ್ದರು (ನೋಡಿರಿ ಎಫೆಸ 4:11, 12). ಅಪೊಸ್ತಲರಿಗೆ ನೇಮಕವಾದ ಕಾರ್ಯಗಳನ್ನು ಸಾಧಿಸಲು ಧೈವೀಕವಾದ ಮಾರ್ಗದರ್ಶನದ ಅಗತ್ಯವಿತ್ತು. ಯೇಸು ಕ್ರಿಸ್ತನು ತನ್ನ ಪರಕ್ಲೇಟೋಸ್ *Parakletos* ಎಂಬಾತನನ್ನು ಕಳುಹಿಸಿ ಅವರಿಗೆ ಬಲಪಡಿಸುವನು, ಅಗತ್ಯತೆಗಳನ್ನು ನೀಗುವನು, ಅವರು ಜೀವಿಸುವಂತೆ ಮಾಡುವನು ಎಂಬದು ಅವರಿಗೆ ಉತ್ತೇಜನಕಾರಿ ಯಾಗಿರಲಿಲ್ಲವೇ ಆದ್ದರಿಂದ ದೇವರು ನಡೆಸುವಾಗ, ಆತನು ಎಲ್ಲವನ್ನು ದಯಪಾಲಿಸುವನು ಎಂಬದನ್ನು ನೆನಪು ಮಾಡಿಕೊಳ್ಳೋಣ.

## ಸತ್ಯದ ಆತ್ಮನು

ಯೇಸು ಆತ್ಮನನ್ನು "ಸತ್ಯದ ಆತ್ಮನು" ಎಂದು ಕರೆದನು. ನಾಮಾಂಕಿತದ ನಿಮಿತ್ತವಾಗಿ,

ಪವಿತ್ರಾತ್ಮನು ಮಾಡುವ ಪ್ರಾಥಮಿಕ ಕೆಲಸದ ಕುರಿತು ಅರಿಯುತ್ತೇವೆ. ಆತನು ಸತ್ಯದ ಆತ್ಮನಾದ್ದರಿಂದ, ಬಿಡುಗಡೆ ನೀಡುವವನು. ತನ್ನ ಕಾರ್ಯದ ಮೂಲಕ ಲೋಕಕ್ಕೆ ಸತ್ಯವನ್ನು ಪ್ರಕಟಿಸುವವನಾಗಿದ್ದನು. ಯೇಸುವಿನಿಂದ ಕೇಳಿದ್ದನ್ನು ಅಪೊಸ್ತಲರು ನೆನಪು ಮಾಡುವಂತೆ ಪ್ರೇರಿಸುತ್ತಿದ್ದನು; ಸಭೆ ಹಾಗೂ ಲೋಕವು ತಿಳಿಯಲೇ ಬೇಕಾದ ಸತ್ಯಗಳನ್ನು ಪ್ರಕಟಿಸುತ್ತಿದ್ದನು (14:26). ಆತನು ದೈವೀಕ ಜ್ಞಾನವನ್ನೂ ಹಾಗೂ ಜ್ಞಾಪಕಪಡಿಸುವಂಥದ್ದನ್ನು ಪ್ರಕಟಿಸುತ್ತಾನೆ ಸಂಗತಿಗಳನ್ನು ತೆಗೆದುಕೊಂಡು ಪ್ರಕಟವಾಗಲಿದ್ದ ಸಂಗತಿಗಳೊಂದಿಗೆ ಹೊಂದಾಣಿಕೆ ಮಾಡುತ್ತಿದ್ದನು.

ಯೇಸು ಹೊರಟು ಹೋದ ನಂತರ, ಲೋಕವು ಅತಿ ಅಗತ್ಯವಾದ ಸತ್ಯವನ್ನು ಸ್ವೀಕರಿಸಬೇಕಿತ್ತು. ಇಲ್ಲಿ ಅತ್ಯಗತ್ಯವಾದ ಮೂರು ಅಗತ್ಯತೆಗಳನ್ನು ಗಮನಿಸುತ್ತೇವೆ: (1) ಸತ್ಯವನ್ನು ಲೋಕಕ್ಕೆ ಪ್ರಕಟಿಸುವದು, (2) ಆ ಸತ್ಯವನ್ನು ಪ್ರಪಂಚಕ್ಕೆ ಮನವರಿಕೆ ಮಾಡುವದು, ಮತ್ತು (3) ಸತ್ಯವನ್ನು ಲೋಕವು ಅಂಗೀಕರಿಸುವಂತೆ ಮಾಡಬೇಕಿತ್ತು. ಈ ಮೂರು ಸವಾಲುಗಳನ್ನು ಪವಿತ್ರಾತ್ಮನೇ ನಡಿಸುತ್ತಿದ್ದನು. ಆತನೇ ಸತ್ಯವನ್ನು ತಂದು, ತನ್ನ ಕೆಲಸದ ನಿಮಿತ್ತ ಅವುಗಳನ್ನು ಸಿದ್ಧಾಂತಪಡಿಸಿ, ಲೋಕವನ್ನು, ನಿತ್ಯವಾಗಿ ಪ್ರಯೋಜನ ಕಾರಿಯಾದ ಆಕಾರಕ್ಕೆ ತರಬೇಕಿತ್ತು.

## ಸಾಕ್ಷಿ ಹೇಳುವವನು

ಪವಿತ್ರಾತ್ಮನು ಸಾಕ್ಷಿ ನೀಡುವ ಮೂಲಕವಾಗಿ ಸತ್ಯವನ್ನು ಉಪದೇಶಿಸುತ್ತಿದ್ದನು. ಯೇಸು ಈ ವಿಚಾರವನ್ನು ವಿವರಿಸಿದನು. ಆತನು ಯೇಸುವಿನ ಸಂದೇಶದ ಹಾಗೂ ಆತನ ಕಾರ್ಯ ಸಾಧನೆಯ ಕುರಿತು ಸಾಕ್ಷಿ ಹೇಳುವದು ಆತನ ಅಧ್ಯತೆಯಾಗಿತ್ತು. ಆತ್ಮನು ತನ್ನನ್ನು ತಾನು ಮಹಿಮೆಪಡಿಸಿಕೊಳ್ಳದೆ, ಯೇಸುವನ್ನು ಹಾಗೂ ಆತನ ಕಾರ್ಯಗಳನ್ನು ಮಾತ್ರ ಮಹಿಮೆಪಡಿಸುವನು. ಯೋಹಾನನು ಬರೆದು, "ಇದಲ್ಲದೆ ಆತ್ಮನು ಸಾಕ್ಷಿ ಕೊಡುವವನಾಗಿದ್ದಾನೆ; ಆತ್ಮನು ಸತ್ಯ ಸ್ವರೂಪನೆ" ಎಂದಿರುವನು (1 ಯೋಹಾನ 5:6ಬಿ). ಹಳೇ ಒಡಂಬಡಿಕೆಯು ಸಹ ಪವಿತ್ರಾತ್ಮನು ಯೇಸುವು ಬಂದಿರುವಂಥ ವಿಚಾರವನ್ನು ಮಾತ್ರ ತಿಳಿಸದೆ, ಆತನ ಬರೋಣದ ಅರ್ಥವನ್ನು ನೀಡಿ, ಆತನಿಂದ ದೊರಕುವ ವಾಗ್ದಾನಗಳನ್ನು ಸಹ ತಿಳಿಸಿರುವನು.

## ಸಮರ್ಥನು

ಇದರ ಸಂಗಡ, ಅಪೊಸ್ತಲರು ಲೋಕದಲ್ಲಿ ಕಾರ್ಯ ನಿರ್ವಹಿಸುವಂತೆ ಶಕ್ತಿಯನ್ನು ಸಾಮರ್ಥ್ಯವನ್ನು ಆತ್ಮನು ನೀಡುವನು. "ಸತ್ಯದ ಆತ್ಮನು ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳುವನು, ನೀವು ಮೊದಲಿನಿಂದ ನನ್ನ ಸಂಗಡ ಇದ್ದ ಕಾರಣ ನೀವು ಸಾಕ್ಷಿಗಳಾಗಿ ದ್ದೀರಿ" (15:26, 27). ಲೋಕವು ಒಂದು ವಿಶೇಷ ವಾದ ಕೊರತೆಯನ್ನು ಹೊಂದಿರುತ್ತದೆ. ಅಪೊಸ್ತಲರು ಯೇಸುವಿನ ಸಂಗಡ ಇದ್ದಾಗ ಸಂಭವಿಸಿದ ಕಾರ್ಯಗಳನ್ನು ನೋಡ ಬಯಸುತ್ತದೆ. ಈ ಪ್ರಕಟನೆಯು ಕಾರ್ಯರೂಪಕ್ಕೆ ಬರಬೇಕು, ಆದಿಯಿಂದ ಇದ್ದತೆಯೇ ಪರಿಪೂರ್ಣವಾಗಿರಬೇಕು. ಅಪೊಸ್ತಲರಲ್ಲಿ ಆ ಸಂಗತಿಗಳು ದೃಢೀಕರಿಸಲ್ಪಟ್ಟು, ಅವರು ಹೇಳಿದ ಸಂದೇಶವನ್ನು ನಂಬುವವರು ಯಥಾರ್ಥವಾಗಿ ನಂಬುವಂತೆ ಇರಬೇಕಿತ್ತು. ಪವಿತ್ರವಾದ ಆ ಸಂದೇಶವನ್ನು ಪ್ರಕಟಿಸುವದು ಮಾತ್ರವಲ್ಲದೆ, ಅದನ್ನು ದೃಢೀಕರಿಸಲೂ ಬೇಕಿತ್ತು, ಅದನ್ನು ಊರ್ಜಿತಮಾಡಿ, ಅದು ಸತ್ಯವಾದದ್ದೇ ಎಂದು ದೃಢೀಕರಿಸಬೇಕಿತ್ತು. ಅಪೊಸ್ತಲರಲ್ಲಿ ಪವಿತ್ರಾತ್ಮನು ನೆಲೆಗೊಂಡು ಈ ಕಾರ್ಯಗಳನ್ನು ಸಾಧಿಸುತ್ತಿದ್ದನು.

## ಮುಕ್ತಾಯ

ಪವಿತ್ರಾತ್ಮನಿಗೆ, ಯೇಸು ಕ್ರಿಸ್ತನು ಬಳಸಿರುವ "ನಾಮಾಂಕಿತವನ್ನು" ತಿಳಿಯುವುದಾದರೆ, ಅವುಗಳು ನಮಗೆ ಯಾವ ವಿಧದಲ್ಲಿ ಅನ್ವಯಿಸುತ್ತವೆ ಎಂದು ತಿಳಿಯೋಣ. ಅಪೊಸ್ತಲರು ಸಭೆಯ ಬುನಾದಿಯನ್ನು ಹಾಕುವಾಗ ಆತನು ಅವರಿಗೆ ಸಹಾಯಕನಾಗಿದ್ದನು, ಯೇಸುವಿಗೆ ಬದಲಾಗಿ ಪವಿತ್ರಾತ್ಮನನ್ನು ಕಳುಹಿಸಲಾಯಿತು ಮತ್ತು ಆತನು ಲೋಕದಲ್ಲಿದ್ದು ಯೇಸುವಿನ ಕೆಲಸವನ್ನು ಮುಂದುವರೆಸಿದನು. ಆತನೇ ಸತ್ಯದ ಆತ್ಮನಾಗಿದ್ದು ಈಗ ನಾವುಗಳು ಅರಿತಿರುವಂತ ಕಾರ್ಯಗಳನ್ನು ಸಂಪೂರ್ಣಮಾಡಿದ್ದಾನೆ. ಆತನು ಯೇಸುವಿನ ಸಾಕ್ಷಿಯಾಗಿದ್ದಾನೆ. ಅದನ್ನು ನಾವು ಪೂರ್ಣಗೊಂಡಿರುವ ನಮ್ಮ ಹೊಸ ಒಡಂಬಡಿಕೆಯಲ್ಲಿ ಗಮನಿಸುತ್ತೇವೆ. ಆತನೇ ಸಾಕ್ಷಿ, ಯೇಸುವಿನ ಕುರಿತಾದ ಸತ್ಯವನ್ನು ತಿಳಿಸಿದವನು. ಆತನು ಸಮರ್ಥನು, ಅಪೊಸ್ತಲರು ಮಾಡಬೇಕಾದ ಕಾರ್ಯಗಳನ್ನು ಸಮರ್ಪಕವಾಗಿ ಮಾಡಲು ಸಾಮರ್ಥ್ಯ ನೀಡಿದನು.

ಅಪೊಸ್ತಲರ ಮಾತುಗಳಲ್ಲಿ ಹಾಗೂ ದಾಖಲೆಗಳಲ್ಲಿ ಆ ಸಂತೈಸುವ ಆತ್ಮನು ಕಾರ್ಯಸಾಧಿಸಿದನು. ಆತನು ಸತ್ಯದ ಮೂಲಕವಾಗಿ ನಮ್ಮ ಮೂಲಕ ಕಾರ್ಯಮಾಡುತ್ತಾನೆ, ಆತನು ಸತ್ಯವನ್ನು ದೃಢಪಡಿಸುವ ಸಾಕ್ಷಿ, ಹಾಗೂ ಯೇಸುವನ್ನು ಹಿಂಬಾಲಿಸುವಂತೆ ಮಾಡುತ್ತಾನೆ. ತಂದೆಯು ಕಳುಹಿಸಿದ ಪವಿತ್ರಾತ್ಮನಿಗಾಗಿ ಯೇಸುವಿನ ಹೆಸರಿನಲ್ಲಿ ಸ್ತೋತ್ರ ಮಾಡೋಣ! ಆತನು ಶಿಲುಬೆಗೇರಿಸಲ್ಪಡುವ ಹಿಂದಿನ ರಾತ್ರಿ, ಆ ಮೇಲುಪ್ಪರಿಗೆಯಲ್ಲಿ ಹೇಳಿದ ಈ ಮಾತುಗಳು ಅಪೊಸ್ತಲರಿಗೆ ಪ್ರೋತ್ಸಾಹ ವಾಗಿದ್ದವು - ನಾವು ಆತನ ಹೆಜ್ಜೆಯ ಜಾಡಿನಲ್ಲಿ ಹೋಗುವಾಗ, ಆತನ ವಾಗ್ದಾನಗಳು ನಮಗೂ ಹಿತವಾಗಿದೆ.

---

*"ಆ ಸಪ್ಪಳವಾದಾಗ ಜನರು ಗುಂಪು ಗುಂಪಾಗಿ ಕೂಡಿಬಂದು ಪ್ರತಿಯೊಬ್ಬರು ತಮ್ಮ ತಮ್ಮ ಭಾಷೆಯಲ್ಲೇ ಇವರು ಮಾತಾಡುವದನ್ನು ಕೇಳಿ ಭ್ರಮೆಗೊಂಡರು. ಎಲ್ಲರು ಆಶ್ಚರ್ಯದಿಂದ ಬೆರಗಾಗಿ - ಇಗೋ, ಮಾತಾಡುತ್ತಿರುವ ಇವರೆಲ್ಲರು ಗಲಿಲಾಯದವರಲ್ಲವೇ. ನಾವು ಪ್ರತಿಯೊಬ್ಬರು ನಮ್ಮ ನಮ್ಮ ಹುಟ್ಟು ಭಾಷೆಯಲ್ಲಿ ಇವರು ಮಾತಾಡುವದನ್ನು ಕೇಳುತ್ತೇವಲ್ಲಾ" (ಅಪೊಸ್ತಲರ ಕೃತ್ಯಗಳು 2:6-8).*

*"ಇದಲ್ಲದೆ ಆತ್ಮನು ಸಾಕ್ಷಿ ಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ. ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು; ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿಗಳುಂಟು; ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ. ನಾವು ಮನುಷ್ಯರ ಸಾಕ್ಷಿಯನ್ನು ತೆಗೆದುಕೊಳ್ಳುತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನಂದರೆ ಆತನು ತನ್ನ ಮಗನ ವಿಷಯದಲ್ಲಿ ಹೇಳಿದ್ದೇ" (1 ಯೋಹಾನ 5:7-9).*